ಕರ್ನಾಟಕ ಸರ್ಕಾರ

# ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ: ಕಾಶಿಇ/ನೇವಿ-1/ಅಉಆ/90/2023-24

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಶೇಷಾದ್ರಿ ರಸ್ತೆ, ಬೆಂಗಳೂರು-01,
ದಿನಾಂಕ:29-11-2023

## ಸುತ್ತೋಲೆ

ವಿಷಯ: 2023-24ನೇ ಶೈಕ್ಷಣಿಕ ಸಾಲಿಗೆ ಸರ್ಕಾರಿ ಕಾಲೇಜುಗಳಲ್ಲಿನ ಹೆಚ್ಚುವರಿ ಬೋಧನಾ ಕಾರ್ಯಭಾರಕ್ಕೆ ಅತಿಥಿ ಉಪನ್ಯಾಸಕರನ್ನು ಆಯ್ಕೆ ಮಾಡಿಕೊಳ್ಳುವ ಬಗ್ಗೆ.

ಉಲ್ಲೇಖ: ಈ ಕಛೇರಿಯ ಸಮಸಂಖ್ಯೆ ಸುತ್ತೋಲೆ ದಿ:06.10.2023 ಮತ್ತು ದಿ:10.10.2023.

* * * * * * *

2023-24ನೇ ಶೈಕ್ಷಣಿಕ ಸಾಲಿಗೆ ಸರ್ಕಾರಿ ಕಾಲೇಜುಗಳಲ್ಲಿನ ಹೆಚ್ಚುವರಿ ಕಾರ್ಯಭಾರಕ್ಕೆ ಅತಿಥಿ ಉಪನ್ಯಾಸಕರನ್ನು ಆಯ್ಕೆ ಮಾಡಿಕೊಳ್ಳಲು ನಡೆದ ಒಂದನೆಯ ಮತ್ತು ಎರಡನೆಯ ಸುತ್ತಿನ ಆನ್‌ಲೈನ್ ಕೌನ್ಸಿಲಿಂಗ್‌ನಲ್ಲಿ ಭಾಗವಹಿಸಿದ ಅಭ್ಯರ್ಥಿಗಳು ಅವರು ಆಯ್ಕೆ ಮಾಡಿಕೊಂಡ ಕಾಲೇಜುಗಳಲ್ಲಿ ಅತಿಥಿ ಉಪನ್ಯಾಸಕರ ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುತ್ತಾರೆ. **ಈ ರೀತಿ ಎರಡನೆಯ ಸುತ್ತಿನ ಆನ್‌ಲೈನ್ ಕೌನ್ಸಿಲಿಂಗ್‌ನಲ್ಲಿ ಸ್ಥಳ ಆಯ್ಕೆ ಮಾಡಿಕೊಂಡು ಕರ್ತವ್ಯಕ್ಕೆ ವರದಿ ಮಾಡಿಕೊಂಡ ಅತಿಥಿ ಉಪನ್ಯಾಸಕರಲ್ಲಿ ಕೆಲವು ಅತಿಥಿ ಉಪನ್ಯಾಸಕರು ಕಾಲೇಜು ಬದಲಾವಣೆ ಬಯಸಿ ಮನವಿಗಳನ್ನು ಸಲ್ಲಿಸುತ್ತಿರುತ್ತಾರೆ.**

ಈ ಹಿನ್ನಲೆಯಲ್ಲಿ, **ಎರಡನೆಯ ಸುತ್ತಿನ ಆನ್‌ಲೈನ್ ಕೌನ್ಸಿಲಿಂಗ್‌ನಲ್ಲಿ ಸ್ಥಳ ಆಯ್ಕೆ ಮಾಡಿಕೊಂಡು ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರಲ್ಲಿ (ಮೊದಲನೆಯ ಸುತ್ತಿನಲ್ಲಿ ಆಯ್ಕೆಗೊಂಡು ಈಗಾಗಲೇ ಒಂದು ಬಾರಿ ಕಾಲೇಜು ಬದಲಾವಣೆ ಮಾಡಿಕೊಂಡಿರುವ ಅತಿಥಿ ಉಪನ್ಯಾಸಕರನ್ನು ಹೊರತುಪಡಿಸಿ)** ಕಾಲೇಜು ಬದಲಾವಣೆ ಬಯಸುವ ಅತಿಥಿ ಉಪನ್ಯಾಸಕರು ಪ್ರಾಂಶುಪಾಲರ ಮೂಲಕ ಅರ್ಜಿ ಸಲ್ಲಿಸುವುದು. ಈ ರೀತಿ ಅರ್ಜಿ ಸಲ್ಲಿಸಿದ ಅತಿಥಿ ಉಪನ್ಯಾಸಕರುಗಳಿಗೆ ಒಂದು ಬಾರಿಯ ಕ್ರಮವಾಗಿ, ವಿವಿಧ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಪ್ರಸ್ತುತ ಲಭ್ಯವಿರುವ ಕಾರ್ಯಭಾರಕ್ಕೆ ಅನುಗುಣವಾಗಿ ಆನ್‌ಲೈನ್ ಮೂಲಕ ಕೌನ್ಸಿಲಿಂಗ್ ನಡೆಸಲಾಗುವುದು.

ಕಾಲೇಜು ಬದಲಾವಣೆ ಬಯಸುವ ಅತಿಥಿ ಉಪನ್ಯಾಸಕರು ಸಂಬಂಧಪಟ್ಟ ಕಾಲೇಜಿನ ಪ್ರಾಂಶುಪಾಲರಿಗೆ ಈ ಸುತ್ತೋಲೆಯೊಂದಿಗೆ ಲಗತ್ತಿಸಿರುವ ನಮೂನೆಯಲ್ಲಿ ಅರ್ಜಿಯನ್ನು ದಿನಾಂಕ:01.12.2023 ರ ಸಂಜೆ 5:00 ಗಂಟೆ ಒಳಗಾಗಿ ಸಲ್ಲಿಸುವುದು.

ಕಾಲೇಜು ಬದಲಾವಣೆ ಬಯಸಿರುವ ಅತಿಥಿ ಉಪನ್ಯಾಸಕರು ತಮಗೆ ಅವಶ್ಯವಿದ್ದ ಕಾಲೇಜುಗಳು ಆಯ್ಕೆಯಾಗದೇ ಇದ್ದಲ್ಲಿ ಸದರಿ ಅತಿಥಿ ಉಪನ್ಯಾಸಕರು ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಕಾಲೇಜಿನಲ್ಲಿಯೇ ಮುಂದುವರೆಯಬಹುದಾಗಿದೆ. ಈ ರೀತಿ ಕಾಲೇಜು ಬದಲಾವಣೆ ಮಾಡಿಕೊಂಡ ಅತಿಥಿ ಉಪನ್ಯಾಸಕರ ಕಾರ್ಯಭಾರ/ ಕಾಲೇಜನ್ನು ಮುಂದಿನ ಕೌನ್ಸಿಲಿಂಗ್ ಪ್ರಕ್ರಿಯೆಯಲ್ಲಿ ಪ್ರದರ್ಶಿಸಲಾಗುತ್ತದೆ. ಕಾಲೇಜು ಬದಲಾವಣೆ ಬಯಸಿ, ಬೇರೆ ಕಾಲೇಜಿನಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಂಡ ಅತಿಥಿ ಉಪನ್ಯಾಸಕರು, ಸದರಿ ಕಾಲೇಜಿನಲ್ಲಿ ಈಗಾಗಲೇ ಕರ್ತವ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರಿಗಿಂತ ಕೊನೆಯವರಾಗಿರುತ್ತಾರೆ.

**(ಮಾನ್ಯ ಆಯುಕ್ತರ ಆದೇಶದ ಮೇರೆಗೆ)**

**ಮುಖ್ಯ ಆಡಳಿತಾಧಿಕಾರಿ**
ಕಾಲೇಜು ಶಿಕ್ಷಣ ಇಲಾಖೆ

**ಕಾಲೇಜು ಬದಲಾವಣೆ ಅರ್ಜಿ ನಮೂನೆ:**

**ಇಂದ:** **ದಿನಾಂಕ:**

------------------

ಅತಿಥಿ ಉಪನ್ಯಾಸಕರು

---------------------------------- ಕಾಲೇಜು

--------------------------------------

GF ID No: ..............................................................

Subject: ..........................................................

Mobile No.: ......................................................

**ಇವರಿಗೆ:**

ಪ್ರಾಂಶುಪಾಲರು

---------------------------------- ಕಾಲೇಜು

--------------------------------------

ಮಾನ್ಯರೆ,

ವಿಷಯ: ಅತಿಥಿ ಉಪನ್ಯಾಸಕರಾಗಿ ಬೇರೆ ಕಾಲೇಜನ್ನು ಎರಡನೇ ಸುತ್ತಿನ ಕೌನ್ಸಿಲಿಂಗ್ ನಲ್ಲಿ ಆಯ್ಕೆ ಮಾಡಿಕೊಳ್ಳುವುದರ ಬಗ್ಗೆ

ನಾನು ದಿನಾಂಕ: ------------------ ರಂದು ನಡೆದ ಮೊದಲ ಸುತ್ತಿನ ಆನ್ ಲೈನ್ ಕೌನ್ಸಿಲಿಂಗ್ ನಲ್ಲಿ ಭಾಗವಹಿಸಿ ------------------------------------------------------ ಕಾಲೇಜನ್ನು ಆಯ್ಕೆ ಮಾಡಿಕೊಂಡು ಕಾಲೇಜಿನಲ್ಲಿ ಕರ್ತವ್ಯಕ್ಕೆ ಹಾಜರಾಗಿ ಕಾರ್ಯ ನಿರ್ವಹಿಸುತ್ತಿದ್ದೇನೆ.

ಕಾಲೇಜು ಶಿಕ್ಷಣ ಇಲಾಖೆ ಲಭ್ಯಗೊಳಿಸಿರುವ Change of College ಪ್ರಕ್ರಿಯೆಯಲ್ಲಿ ಭಾಗವಹಿಸಲು ಇಚ್ಛಿಸುತ್ತೇನೆ ಹಾಗೂ ಇದಕ್ಕೆ ಸಂಬಂದಿಸಿದ ನನ್ನ ಈ ಅರ್ಜಿಯನ್ನು ಸ್ವೀಕರಿಸಿ eMIನಲ್ಲಿ ನನ್ನ ಇಚ್ಛೆಯನ್ನು ನಮೂದಿಸಬೇಕೆಂದು ಕೋರುತ್ತಿದ್ದೇನೆ.

(ಅತಿಥಿ ಉಪನ್ಯಾಸಕರ ಹೆಸರು ಮತ್ತು ಸಹಿ)